ಕೋಲಾರ ಕಲ್ಯಾಣ ಸಹಾಯಾಭಿವೃದ್ಧಿ ಫಂಡ್ ಲಿಮಿಟೆಡ್ ಆಫಿಸಿನಿಂದ.

ಫಂಡ್ ಮಜಕೂರ್ ವಿಸಿಷ್ಟ ಷೇರ್ ಹೋಲ್ಡರ್‌ಗಳಿಗೂ ತಿಳಿಯಪಡಿಸುವದೇನಂದರೆ,—1 ಕೋಲಾರ ಕಲ್ಯಾಣ ಸಹಾಯಾಭಿವೃದ್ಧಿ ಫಂಡ್ (ಲಿಮಿಟೆಡ್)ಯನ್ನ ಚಿಂತಾಮಣಿಯಲ್ಲಿ ಇರುವ ಜಾಂಡ್ರಹಳ್ಳಿ ಬಾಲೋದಯ ವಿವಾಹ ಕಂಪೆನೀ ಲಿಮಿಟೆಡ್ ಆಫಿಸಿಗೆ ಕೀಂಸತಕ್ಕ ವಿಷಯ ಚರ್ಚೆಯಿಂದ ವ್ಯವಸ್ಥೇಮಾಡಲೂ 1889ನೇ ಇಸವಿ ಜೂ ೯ನೇ ತಾರೀಖು ಶನಿವಾರ ಮಧ್ಯಾನ್ನ 2 ಘಂಟೆಗೆ ಫಂಡ್ ಹೌಸಿನಲ್ಲಿ ಸಭೆ ಕೀರಬೇಕೆಂದು ಕೋರಲ್ಪಡುತ್ತೆ.— ತಾರೀಖು 23ನೇ ಮೇ 1889.

ಕೃಷ್ಣಶಾಸ್ತ್ರಿ, ಸೆಕ್ರಟೆರಿ.

ಕೊಡಗು ಫಾರೆಸ್ಟ್ ಡಿಪಾರ್ಟ್‌ಮೆಂಟ್.

ನೋಟಸ.

ಸ್ಯ 1889ನೇ ಇಸವಿ ಮೇ ತಾರೀಖು 4ರಲ್ಲು ಹುಣಸೂರು ಡಿಪೋ ಬಾಬತು ಈ ಕೆಳಗೆ ನಮೂದುಮಾಡಿದ ತೊಲೆ ವಗ್ಗೆರೆ ಸಾಮಾನುಗಳು ಸ್ಯ 1889ನೇ ಜೂ ತಾರೀಖು 10ರಲ್ಲು ಹರಾಜ್ ಹಾಕಲ್ಪಡುವವು.

ತ್ಯಾಗ	770 ತೊಲೆ	22000 ಅಡಿ
ಹೊನ್ನೆ ಮತ್ತು ಇತರ	750 ,,	18000 ,,
ತ್ಯಾಗದ ಮರದ ಬಾಬತು ಕುಯಿದ ಸಾಮಾನುಗಳು		9000 ,,
ಗಾಡೀಚಕ್ಕದ ಆರೇಕಾಲುಗಳು ವಟ್ಟೇಮರಗಳು		2500 ಸಂಖೆ

ಷರತ್:—ಸ್ಯ 1885ನೇ ಇಸವಿ ಮೇ ತಾರೀಖು 16 ನಂಬರು 9ರ ಚೀಫ್ ಕಮ್ಮಿಷನರ್ ಸಾಹೆಬರವರ ನೋಟಿಫಿಕೇರ್ಷ ಮೇರೆ.

ಎಫ್. ಬಿ. ಡಿಕ್ರಸ್,
ಡೆಪ್ಯುಟಿ ಕನ್‌ಸರ್‌ವೇಟರ್, ಆಫ್ ಫಾರೆಸ್ಟ್ಸ್.

ಗವರ್ಣಮೆಂಟ್ ತಯಾರೀ ಬಾಬತು ಸಿಂಕೋನಾಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವೆ ಧರ್ಮಾರ್ಥವಾಗಿ ಗವರ್ಣಮೆಂಟ್ ಆಫಿಸರ್‌ಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟೂನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 3—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 7—4—0; ಬಂದು ಪೌ ಔಷಧವುಳ್ಳ ಡಬ್ಬಿಗೆ ರೂ. 14—0—0; ಬೊಟೂನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಬಂದಕ್ಕೆ ರೂ. 4—14—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 9—4—0, ಬಂದು ಪೌವುಳ್ಳ ಡಬ್ಬಿಗೆ 17 ರೂ. 8ಆಣೆ; ಈ ಔಷಧವು ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ಸ ವ ನೇಟೀವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ನದರೀ ಕಿಮ್ಮತಿನೊಂದಿಗೆ ದರ 4 ಔನ್ಸ್ ತಗರದ ಡಬ್ಬಿಗೆ 4 ಆಣೆಯೂ, 8 ಔನ್ಸ್ ತಗರದ ಡಬ್ಬಿಗೆ 8 ಆಣೆ ಟಪ್ಪಾಲ್ ಹಾಸಲೂ, ಬಂದು ಪೌ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

Mysore Govt Central Press, Bangalore—1889.